# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ರೇಣುಕ ಕೆ ಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತು ಶ್ರೀ ಡಿ ಕೆ ನಾಗರಾಜಗೌಡ, ಕಾರ್ಯದರ್ಶಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಕರ್ತವ್ಯಲೋಪ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

**ಓದಲಾಗಿದೆ:** 1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ-2680/2013/ಡಿಆರ್‌ಇ-1, ದಿನಾಂಕ: 12-04-2017.

2. ಮಾನ್ಯ ಉಪಲೋಕಾಯುಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-2680/2013/ಡಿಆರ್‌ಇ-1, ದಿನಾಂಕ: 04-04-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 12-04-2017ರವರ ಪತ್ರದೊಂದಿಗೆ ಕನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಕೆ ವಿ ವೆಂಕಟೇಶಮೂರ್ತಿ, ಕೊಂಗನಹಳ್ಳಿ ಗ್ರಾಮ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಶ್ರೀಮತಿ ರೇಣುಕ ಕೆ ಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತು ಶ್ರೀ ಡಿ ಕೆ ನಾಗರಾಜಗೌಡ, ಕಾರ್ಯದರ್ಶಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದಿಕೊಂಡು ತನಿಖೆ ಮಾಡಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ಈ ಪ್ರಕರಣದಲ್ಲಿ ಚಿಂತಾಮಣಿ ತಾಲ್ಲೂಕು ಪೆರಮಾಚನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಅನಧಿಕೃತವಾಗಿ ವೆಚ್ಚ ಮಾಡಿರುವ ಬಗ್ಗೆ ಅವ್ಯವಹಾರಗಳನ್ನು ನಡೆಸಿದ ಬಗ್ಗೆ ದೂರು ಸಲ್ಲಿಸಿದರೂ ಸಹ ಸಂಬಂಧಿಸಿದ ಅಧಿಕಾರಿಯವರು ತನಿಖೆ ನಡೆಸಿ ವರದಿ ನೀಡಿರುವುದಿಲ್ಲ. ಸರ್ಕಾರದ ಕಾರ್ಯದರ್ಶಿಗಳು ತಮ್ಮ ಪತ್ರದಲ್ಲಿ ತನಿಖೆ ನಡೆಸಿ ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಹಿಂಬರಹ ನೀಡಲು ಸೂಚಿಸಿದ್ದರೂ ಸಹ ಆಲಸ್ಯ ಮನೋಭಾವನೆಯಿಂದ ವರ್ತಿಸಿ ಗ್ರಾಮ ಪಂಚಾಯತಿಯಲ್ಲಿಯ ಅವ್ಯವಹಾರಗಳನ್ನು ಪರಿಶೀಲಿಸದೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಯವರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ನಷ್ಟ ಉಂಟು ಮಾಡಿರುತ್ತಾರೆ. ಸರ್ಕಾರದ ಯೋಜನೆಯನ್ನು ಮೋಸ ಮಾಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಚಿಕ್ಕಬಳ್ಳಾಪುರ ಇವರಿಗೆ ಆದೇಶಿಸಲಾಗಿತ್ತು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ಇವರು ರೇಷ್ಮೆ ಉಪ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕ ಬಳ್ಳಾಪುರ ಇವರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ. ಅವರ ವರದಿಯನ್ನು ಪರಿಶೀಲಿಸಿದಾಗ, ಅವರು ಈ ಕೆಳಕಂಡಂತೆ ವರದಿಯನ್ನು ಸಲ್ಲಿಸಿರುತ್ತಾರೆ.

- ದಿ.09-04-2012 ರಿಂದ 28-04-2012 ರವರೆಗೆ ಒಟ್ಟು ರೂ.4,570/-ಗಳನ್ನು ರಸೀದಿಯ ಮೂಲಕ ವಸೂಲಿ ಮಾಡಿ ದಿ.18-05-2012 ರಂದು ಸರ್ಕಾರಕ್ಕೆ ಜಮಾ ಮಾಡಿರುವುದು ದಾಖಲಾತಿಗಳಿಂದ ಗುರುತಿಸಲಾಗಿರುತ್ತದೆ. ಅಂದರೆ ಹಣ ವಸೂಲಿ ಮಾಡಿದ 20 ದಿನಗಳ ನಂತರ ಸರ್ಕಾರಕ್ಕೆ ಸಂದಾಯ ಮಾಡಿದ್ದು, ಸರ್ಕಾರದ ಹಣವನ್ನು ತಾತ್ಕಾಲಿಕವಾಗಿ ದುರುಪಯೋಗ ಪಡಿಸಿಕೊಂಡಿರುವುದನ್ನು ಗಮನಿಸಬಹುದಾಗಿರುತ್ತದೆ.
- ರಾಘವೇಂದ್ರ ಬಾರ್‌ಗೆ ಅನುಮತಿ ನೀಡುವ ಸಂಬಂಧ 3 ಸಭೆಗಳಲ್ಲಿ ವಿಷಯವನ್ನು ಚರ್ಚಿಸಿದ್ದು, 1ನೇ ಸಭೆಯಲ್ಲಿ ಠರಾವಿನ ವಿಷಯವು ಅಸ್ಪಷ್ಟವಾಗಿದ್ದು, 2ನೇ ಸಭೆಯಲ್ಲಿ ಬಾರ್‌ಗೆ ರಹದಾರಿ ನೀಡುವ ಬಗ್ಗೆ ಸಂಪೂರ್ಣ ತಿರಸ್ಕಾರ ವ್ಯಕ್ತಪಡಿಸಿದ್ದು, ದಿ.16-01-2013 ರ ಸಭೆಯಲ್ಲಿ ಮತ್ತೆ ಅದೇ ವಿಷಯವನ್ನು ಚರ್ಚಿಸಿ

ಅಬಕಾರಿ ನೀತಿ ನಿಯಮಗಳಿಗೊಳಪಟ್ಟು ಕಾನೂನು ಉಲ್ಲಂಘನೆಯಾಗದಂತೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನಿಸಿರುವುದನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಬಕಾರಿ ನೀತಿಗಳಿಗೆ ತೊಂದರೆಯಾಗದಂತೆ ಮತ್ತು ಯಾವುದೇ ಅವಘಡಗಳಾಗದಂತೆ ಅನುಮತಿ ನೀಡಿರಬಹುದೇ ಎಂಬುದು ಸಂಶಯಾಸ್ಪದವಾಗಿರುತ್ತದೆ.

- ಕೋರ್ಲಪರ್ತಿ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ತಯಾರಿಸಿದ 176 ಫಲಾನುಭವಿಗಳ ಪಟ್ಟಿಯನ್ನು 100 ಕ್ಕೆ ಇಳಿಸಿದ್ದು, 76 ಫಲಾನುಭವಿಗಳ ಅನರ್ಹತೆಯ ಕಾರಣಗಳ ಬಗ್ಗೆ ವಿವರಣೆ ನೀಡಲು ಪಂಚಾಯತಿ ಕಾರ್ಯದರ್ಶಿಗಳು ವಿಫಲರಾಗಿರುತ್ತಾರೆ. ಮತ್ತು ಇದಕ್ಕೆ ಸಂಬಂಧಪಟ್ಟ ಯಾವುದೇ ದಾಖಲಾತಿಗಳು ಲಭ್ಯವಿರುವುದಿಲ್ಲ. ಸದರಿ ಪಟ್ಟಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಅನುಬಂಧ-10 ರಲ್ಲಿ ಇಲ್ಲದೇ ಇರುವ ಹೆಸರುಗಳನ್ನು ಅನುಬಂಧ 10-ಎ ಯಲ್ಲಿ ಸೇರಿಸಿರುವುದನ್ನು ಗಮನಿಸಬಹುದಾಗಿರುತ್ತದೆ. ಅದನ್ನು ಗಮನಿಸಿದಾಗ ದೂರಿನ ಅಂಶಗಳು ರುಜುವಾತಾಗುತ್ತವೆ.
- ಖಾಸಗಿ ಕೊಳವೆ ಬಾವಿ ಕೊರೆಯುವ ಬಾಬ್ತು ಮುಂತಾದ ಕುಡಿಯುವ ನೀರಿನ ಅನುಕೂಲಕ್ಕೆ ಖರ್ಚು ಮಾಡಿರುವುದರ ಜೊತೆಗೆ ಪೋಲಿಯೋ ಕಾರ್ಯಕ್ರಮಕ್ಕೆ, ಸ್ವಾತಂತ್ರ್ಯ ದಿನಾಚರಣೆ, ರೆಡ್‌ಕ್ರಾಸ್ ಸಂಸ್ಥೆಗೆ ನಿಯೋಜಿಸಿರುವ ನಿಯೋಜಿತ ವ್ಯಾಪ್ತಿಗೆ ಮೀರಿ ಖರ್ಚು ಮಾಡಿರುವುದು ಕಂಡುಬರುತ್ತದೆ.
- ಮೋಟಾರು ಖರೀದಿ, ಪೈಪ್, ಲೇಖನಿ ಸಾಮಗ್ರಿಗಳನ್ನು ಒಂದೇ ದಿನ ರೂ.25,000/- ಗಳಿಗೆ ಮೇಲ್ಪಟ್ಟು ಖರೀದಿಸಿರುವುದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆಯೆಂದು ವರದಿಯನ್ನು ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಯ ವರದಿಯ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, 1 ಮತ್ತು 2ನೇ ಎದುರುದಾರರು ತನ್ನ ಆಕ್ಷೇಪಣೆಯಲ್ಲಿ ಕರ ವಸೂಲಿಗಾರರು ಬ್ಯಾಂಕಿಗೆ ಕಂದಾಯ ವಸೂಲಾತಿ ಹಣ ಸಂದಾಯ ಮಾಡುವಲ್ಲಿಮ ವಿಫಲರಾಗಿರುವುದಕ್ಕೆ ಸಂಬಂಧಿಸಿದಂತೆ ಅವರಿಗೆ ಹಿಂಬರಹ ನೀಡಲಾಗಿದೆ. ರಾಘವೇಂದ್ರ ವೈನ್ಸ್‌ಗೆ ಎನ್.ಓ.ಸಿ. ನೀಡಿರುವುದಿಲ್ಲ. ಗ್ರಾಮ ಪಂಚಾಯತಿಯಲ್ಲಿ ತಯಾರಿಸಿರುವ ಪಟ್ಟಿಯಲ್ಲಿ ಗುಡಿಸಲು ಮನೆ, ದಂತಿಗೆ ಮನೆ, ಹಂಚಿನ ಮನೆ, ಶಿಥೀಲಗೊಂಡ ಮನೆ ಹಾಗೂ ವಾಸಿಸಲು ಯೋಗ್ಯವಿಲ್ಲದಂತಹ ಮನೆಗಳನ್ನು ಸೇರಿಸಿ 176 ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದ್ದು, ಸದರಿ ಪಟ್ಟಿಯನ್ನು ಶಾಸಕರ ಅಧ್ಯಕ್ಷತೆಯಲ್ಲಿ ನಡೆದ ಜಾಗೃತಿ ಸಮಿತಿಯು ಕ್ರಾಸ್ ವೆರಿಫಿಕೇಷನ್ ನಡೆಸಲು ಗ್ರಾಮ ಪಂಚಾಯತಿ ಕಾರ್ಯದರ್ಶಿಯಾದ ಶಂಕರಪ್ಪರವರನ್ನು ನಿಯೋಜಿಸಿದ್ದು, ಅವರು ಪರಿಶೀಲನೆಗೆ ತೆರಳಿದಾಗ ಕೆಲವು ಫಲಾನುಭವಿಗಳು ತಪ್ಪಿಹೋಗಿದ್ದು, ಅವರು ಅರ್ಹರಿದ್ದ ಕಾರಣ ದೂರಿನಲ್ಲಿ ಸೂಚಿಸಿರುವಂತಹ ಫಲಾನುಭವಿಗಳನ್ನು ಪಟ್ಟಿಗೆ ಸೇರಿಸಿ ಅನುಮೋದನೆಗಾಗಿ ಜಾಗೃತಿ ಸಮಿತಿಗೆ ಸಲ್ಲಿಸಿರುತ್ತಾರೆ. ಲಾಟರಿ ಕಾರ್ಯಕ್ರಮದಲ್ಲಿ 100 ಮಂದಿ ಫಲಾನುಭವಿಗಳನ್ನು ಆಯ್ಕೆ ಮಾಡಿರುತ್ತಾರೆ. 13 ನೇ ಹಣಕಾಸು ಯೋಜನೆಯಲ್ಲಿ ಬಿಡುಗಡೆಯಾಗಿರುವಂತಹ ಅನುದಾನವನ್ನು ಸೂತ್ರೋಲೆಯ ನೀತಿ ನಿಯಮಗಳಂತೆ ಕ್ರೀಯಾ ಯೋಜನೆಯನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ರೂಪಿಸಿ ಸರ್ವಾನುಮತದಿಂದ ಅನುಮೋದಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ತಾಲ್ಲೂಕು ಪಂಚಾಯತಿಯ ಕಾರ್ಯನಿವಾಹಣಾಧಿಕಾರಿಯವರಿಂದ ಅನುಮೋದನೆ ಪಡೆದ ನಂತರ ಖರ್ಚು ವೆಚ್ಚಗಳನ್ನು ಮತ್ತೊಮ್ಮೆ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಅನುಮೋದಿಸಲಾಗಿರುತ್ತದೆ. ದೂರಿಗೆ ಸಂಬಂಧಿಸಿದಂತೆ ಪರಿಶೀಲನೆಯಲ್ಲಿ ಗಮನಿಸಿರುವಂತೆ ರೂ.25,000/- ಗಳ ಖರೀದಿ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅದಕ್ಕೆ ಸಂಬಂಧಿಸಿದ ಖರೀದಿ ವೋಚರಗಳನ್ನು ಕೋಟೇಷನ್‌ಗಳನ್ನು ಲಗತ್ತಿಸಲಾಗಿದೆ ಹಾಗೂ ಸದರಿ ಅವದಿಯಲ್ಲಿ ಶ್ರೀ ನಾಗರಾಜರಾವ್, ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಪ್ರಭಾರದಲ್ಲಿದ್ದರು. ದೂರುದಾರರು ಗ್ರಾಮ ಪಂಚಾಯತಿಗೆ ಬರುವ ಸರ್ಕಾರಿ ನೌಕರರನ್ನು ಬೆದರಿಸುವುದು, ಅವರಿಂದ ಅಕ್ರಮವಾಗಿ ಅನಧಿಕೃತ ಚಟುವಟಿಕೆಗಳನ್ನು ನಡೆಸುವುದರಲ್ಲಿ ನಿಸ್ಸೀಮರಾಗಿದ್ದು, ಶ್ರೀ ಕೆ.ವಿ.ವೆಂಕಟೇಶಮೂರ್ತಿ ಯವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದಾಗ ತನ್ನ ಹೆಸರಿನಲ್ಲಿಯೇ ದಿ.16-10-2010 ರಂದು ಚೆಕ್ ಸಂ.256711 ರಲ್ಲಿ ರೂ.50,000/- ಗಳನ್ನು ಡ್ರಾ ಮಾಡಿದ್ದು, ಅವರ ಮೇಲೆ ಶಿಸ್ತು ಕ್ರಮ ಕೈಗೊಂಡು ಹಣವನ್ನು ಗ್ರಾಮ ಪಂಚಾಯತಿಗೆ ವಾಪಾಸ್ಸು ಕಟ್ಟುವಂತೆ ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ.

1 ಮತ್ತು 2 ನೇ ಎದುರುದಾರರ ಆಕ್ಷೇಪಣೆಗಳನ್ನು ಪರಿಶೀಲಿಸಿದಾಗ ರೂ.25,000/- ಗಳ ಖರೀದಿ ಬಗ್ಗೆ ಆಕ್ಷೇಪಣೆಗೆ ಸಂಬಂಧಿಸಿದಂತೆ ಶ್ರೀ ನಾಗರಾಜರಾವ್, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಪ್ರಭಾರದಲ್ಲಿದ್ದಾಗ ಸದರಿ ಖರೀದಿ ಆಗಿರುತ್ತದೆಯೆಂದು ಹೇಳಿರುವ ಕಾರಣ ಅವರನ್ನು 3ನೇ ಎದುರುದಾರರನ್ನಾಗಿ ಮಾಡಿ ಅವರಿಂದ ಆಕ್ಷೇಪಣೆಯನ್ನು ತರಿಸಲಾಗಿತ್ತು.

3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದುರು ಅರ್ಜಿಯಲ್ಲಿ ನಮೂದಿಸಿರುವ ಅವ್ಯವಹಾರಗಳ ಬಗ್ಗೆ ಅವರ ಅಲ್ಪಾವಧೀಯಲ್ಲಿ ಸಾರ್ವಜನಿಕರಲ್ಲಿ ದುರ್ನಡತೆಯಿಂದ ವರ್ತಿಸಿ, ಅನುದಾನವನ್ನು ಅವರು ದುರುಪಯೋಗ ಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ಲಂಚದ ಬೇಡಿಕೆಯನ್ನು ಇಟ್ಟಿರುವ

ಸಾಕ್ಷ್ಯಾದಾರಗಳು ಲಭ್ಯವಿರುವುದಿಲ್ಲ. ಅವರ ಅವಧಿಗೆ ಸಂಬಂಧೀಸಿದಂತೆ ನಿಯಮಾನುಸಾರ ಗ್ರಾಮ ಪಂಚಾಯತಿಯ ಆಡಳಿತ ಮಂಡಳಿಯಿಂದ ಅನುಮೋದನೆ ಪಡೆದು ಮೇಲಾಧೀಕಾರಿಗಳಿಂದ ಮಂಜೂರಾತಿ ಪಡೆದ ನಂತರ ಗ್ರಾಮ ಪಂಚಾಯತಿಯಲ್ಲಿ ಯೋಜನೆಗಳನ್ನು ಅನುಷ್ಠಾನಗೊಳಿಸಿರುತ್ತಾರೆ. ಮನೆ ನಿವೇಶನಗಳ ರೆಜಿಸ್ಟರ್ ಇಲ್ಲದಿದ್ದರೂ ಖಾತೆಗಳನ್ನು ವರ್ಗಾವಣೆ ಮಾಡಿ ಸರ್ಕಾರಕ್ಕೆ ಅಟಾಂಪೊ ಡ್ಯೂಟಿ ನಷ್ಟ ಮಾಡಿರುವ ಪ್ರಕರಣಗಳು ಅವರ ಅವಧಿಯಲ್ಲಿ ನಡೆದಿರುವುದಿಲ್ಲ. ಗ್ರಾಮ ಪಂಚಾಯತಿಯಲ್ಲಿ ವಸೂಲಾದ ತೆರಿಗೆಗಳನ್ನು ನಿಯಮಾನುಸಾರ ಬ್ಯಾಂಕ್ ಖಾತೆಗಳಿಗೆ ಗ್ರಾಮ ಪಂಚಾಯತಿ ಕರ ವಸೂಲಿಗಾರರಿಂದ ಸಂದಾಯ ಮಾಡಿಸಿರುತ್ತಾರೆ. ಅವರ ಅವಧಿಯಲ್ಲಿ ಬಾರ್‌ಗಳ ಬಗ್ಗೆ ಗ್ರಾಮಸ್ಥರು ಆಕ್ಷೇಪಣೆಗಳನ್ನು ಸಲ್ಲಿಸದಿರುವುದಿಲ್ಲ ಮತ್ತು ಎನ್.ಓ.ಸಿ. ಪತ್ರಗಳನ್ನು ನೀಡಿರುವುದಿಲ್ಲ. ಗ್ರಾಮ ಪಂಚಾಯತಿಯಲ್ಲಿ ಅವಶ್ಯಕವಾದ ಸಾಮಗ್ರಿಗಳ ಸಾಮಗ್ರಿಗಳ ಖರೀದಿಗಳ ಬಗ್ಗೆ ಬಲ್ಬ್‌ಗಳು, ಪೈಪ್‌ಗಳೂ ಮತ್ತು ಕೇಬಲ್‌ಗಳ ಸರಬರಾಜಿನ ಬಗ್ಗೆ ಗ್ರಾಮ ಪಂಚಾಯತಿಯ ಆಡಳಿತ ಮಡಳಿಯ ಸಾಮಾನ್ಯ ಸಭೆಗಳಲ್ಲಿ ಚರ್ಚಿಸಿ ಸಾಲದ ರೂಪದಲ್ಲಿ ತುರ್ತು ಅವಶ್ಯಕತೆಯಲ್ಲಿ ನೀರು ಸರಬರಾಜಿಗೆ ಸಂಬಂಧಿಸಿದಂತೆ ಮತ್ತು ಮೂಲಭೂತ ಸೌಕರ್ಯಗಳಿಗೆ ಸಾಮಗ್ರಿ ಮತ್ತು ಸೇವೆಗಳು ಎಂಬ ಪಾರದರ್ಶಕ ನಿಯಮದಂತೆ ಅವರ ಕರ್ತವ್ಯದ ಅವಧಿಯಲ್ಲಿ ನಿರ್ವಹಿಸದಿ ಅನುದಾನವನ್ನು ಸರಬರಾಜುದಾರರಿಗೆ ಬಿಡುಗಡೆ ಮಾಡಿರುತ್ತಾರೆ. ಅವರು ದಿ.31-08-2012 ರಲ್ಲಿ ನಿವೃತ್ತಿ ಹೊಂದಿದ್ದು, ಅವರ ಕರ್ತವ್ಯದ ಅವಧಿ ಮುಕ್ತಾಯಗೊಂಡ ನಂತರ ಅವರು ನಿರ್ವಹಿಸಿರುವ ಗ್ರಾಮ ಪಂಚಾಯತಿಗಳ ಪ್ರಭಾರವನ್ನು ಪಟ್ಟಿಯಲ್ಲಿ ದಾಖಲಿಸಿ ದಾಖಲೆಗಳನ್ನು, ವಹಿಗಳನ್ನು ನಿಗದಿತ ನೌಕರರಿಗೆ ಹಸ್ತಾಂತರಿಸಿರುತ್ತಾರೆಂದು ಆಕ್ಷೇಪಣೆಯಲ್ಲಿ ತಿಳಿಸಿದ್ದು, ಆದ್ದರಿಂದ:-

- ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರು ರೇಷ್ಮೆ ಉಪ ನಿರ್ದೇಶಕರು ಇವರ ಮೂಲಕ ನಡೆಸಿರುವ ವರದಿಯಲ್ಲಿ ಹೇಳಲಾದ ಅವ್ಯವಹಾರಗಳಿಗೆ ಮತ್ತು ಕರ್ತವ್ಯ ಲೋಪಕ್ಕೆ ಯಾವ ಅಧಿಕಾರಿಗಳು ಕಾರಣಕರ್ತರಾಗಿರುತ್ತಾರೆ ಮತ್ತು ಕಾರಣಕರ್ತರಾದ ಅಧಿಕಾರಿಗಳ ಹೆಸರಿನ ಸಮೇತ ವರದಿ ನೀಡುವಂತೆ ಮತ್ತು
- ದೂರುದಾರರು ಗ್ರಾಮ ಪಂಚಾಯತಿಯ ಸದಸ್ಯರಾಗಿದ್ದಾಗ ಅವರ ಹೆಸರಿನಲ್ಲಿ ದಿ.16-10-2010 ರಂದು ಚೆಕ್ ಸಂ.256711 ರಲ್ಲಿ ರೂ.50,000/- ಗಳನ್ನು ಡ್ರಾ ಮಾಡಿದ ಬಗ್ಗೆ ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ಮತ್ತು ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆಯೋ ಎನ್ನುವ ಬಗ್ಗೆ 15 ದಿನಗಳೊಳಗಾಗಿ ವರದಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರಿಗೆ ಆದೇಶಿಸಲಾಗಿತ್ತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರು ವರದಿಯನ್ನು ನೀಡಿದ್ದು, ವರದಿಯಲ್ಲಿ ಅವ್ಯವಹಾರಕ್ಕೆ ಸಂಬಂಧಿಸಿದ ಅಧಿಆಕರಿಗಳ ವಿವರಗಳನ್ನುನೀಡಿದ್ದು, ಅದರಲ್ಲಿ ಶ್ರೀಮತಿ ಕೆ.ಸಿ.ರೇಣುಕ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಶ್ರೀ ಡಿ ಕೆ ನಾಗರಾಜಗೌಡ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಇವರುಗಳು ಸದರಿ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತೀದ್ದರು ಮತ್ತು ಮುಂದುವರೆದು ಶ್ರೀ ಕೆ.ಡಿ.ವೆಂಕಟೇಶಮೂರ್ತಿ, ಕೊಂಗನಹಳ್ಳಿ ಗ್ರಾಮ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು ಇವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ಧಾಗ, ದಿ.16-10-2010 ರಂದು ರೂ.50,000/- ಗಳನ್ನು ಡ್ರಾ ಮಾಡಿರುವ ಅನುದಾನವನ್ನು ಅವರಿಂದ ವಸೂಲಿ ಮಾಡಿ ಹಣ ಡ್ರಾ ಮಾಡಲು ಕಾರಣರಾದವರ ವಿರುದ್ಧ ತಕ್ಷಣ ಕ್ರಿಮಿನಲ್ ಮೊಕದ್ದಮೆ ಹೂಡಿ ವರದಿ ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಿಂತಾಮಣಿ ಇವರಿಗೆ ಆದೇಶಿಸಲಾಗಿದೆಯೆಂದು ವರದಿಯನ್ನು ನೀಡಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಇವರ ವರದಿಯನ್ನು ಪರಿಶೀಲಿಸಿದಾಗ, ದೂರಿನಲ್ಲಿ ನಮೂದಿಸಿರುವ ಅವ್ಯವಹಾರ ನಡೆದಿರುವ ಸಮಯದಲ್ಲಿ 1 ಮತ್ತು 2ನೇ ಎದುರುದಾರರು ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯದಲ್ಲಿದ್ದರು ಎಂದು ವರದಿ ನೀಡಿರುತ್ತಾರೆ. ಅಲ್ಲದೇ ವಿಚಾರಣಾ ವರದಿಯಲ್ಲಿ ನೀಡಿರುವ ಅಂಶಗಳನ್ನು ಪರೀಶಿಲಿಸಿದಾಗ ಮತ್ತು ಮೇಲ್ಕಂಡ ಕಂಡಿಕೆ 3 (1 ರಿಂದ 5) ರಲ್ಲಿ ತಿಳಿಸಿರುವ ಅಂಶಗಳನ್ನು ಗಮನಿಸಿದಾಗ, 1 ಮತ್ತು 2ನೇ ಎದುರುದಾರರು ಅಧಿಕಾರ ದುರುಪಯೋಗ ಮತ್ತು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಆದ್ದರಿಂದ ಶ್ರೀಮತಿ ರೇಣುಕ ಕೆ ಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತು ಶ್ರೀ ಡಿ ಕೆ ನಾಗರಾಜಗೌಡ, ಕಾರ್ಯದರ್ಶಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆಯಾದ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಮದ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ,

1966 ರ ನಿಯಮಗಳು 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುವುದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಶ್ರೀಮತಿ ರೇಣುಕ ಕೆ ಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತು ಶ್ರೀ ಡಿ ಕೆ ನಾಗರಾಜಗೌಡ, ಕಾರ್ಯದರ್ಶಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/329/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 08–05–2017.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ರೇಣುಕ ಕೆ ಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮತ್ತು ಶ್ರೀ ಡಿ ಕೆ ನಾಗರಾಜಗೌಡ, ಕಾರ್ಯದರ್ಶಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14 (ಎ) ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಇವರಿಗೆ ವಹಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ–8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ:</u>**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 339 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿಕ್ಕಬಳ್ಳಾಪುರ ಜಿಲ್ಲೆ.
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
6) ಶ್ರೀಮತಿ ರೇಣುಕ ಕೆ ಸಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
7) ಶ್ರೀ ಡಿ ಕೆ ನಾಗರಾಜಗೌಡ, ಕಾರ್ಯದರ್ಶಿ, ಪೆರಮಾಚನಹಳ್ಳಿ ಗ್ರಾಮ ಪಂಚಾಯತಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ
8) ಗಣಕ ಕೋಶ–ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.